# ಗುರು ಗರಡಿಯಲ್ಲಿ ತಾರೆಗಳ ಹಿಂಡು

'ಮುಕುಂದ ಮುರಾರಿ' ಬೆನ್ನಿಗೆ ಮತ್ತೊಂದು ಮಲ್ಟಿ ಸ್ಟಾರರ್ ಚಿತ್ರ ತೆರೆ ಕಾಣುತ್ತಿದೆ (ನ. 11ರಂದು). ಗುರು ದೇಶಪಾಂಡೆ ನಿರ್ದೇಶನದ 'ಜಾನ್ ಜಾನಿ ಜನಾರ್ದನ್' ಹೆಸರಿನ ಈ ಚಿತ್ರದಲ್ಲಿ ಅಜೇಯ್ ರಾವ್, ಲೂಸ್ ಮಾದ ಯೋಗಿ ಹಾಗೂ 'ಮದರಂಗಿ' ಖ್ಯಾತಿಯ ಕೃಷ್ಣ ಒಟ್ಟಾಗಿ ನಟಿಸಿರುವುದು ಚಿತ್ರದ ವಿಶೇಷ.

'ರಾಜಾಹುಲಿ' ಚಿತ್ರದ ಮೂಲಕ ಮತ್ತೊಂದು ಯಶಸ್ಸಿನ ಹುಡುಕಾಟದಲ್ಲಿರುವ ಗುರು ದೇಶಪಾಂಡೆ 'ಜಾನ್ ಜಾನಿ ಜನಾರ್ದನ್' ಚಿತ್ರವನ್ನು ರೂಪಿಸಲು ಸಾಕಷ್ಟು ಕಸರತ್ತು ಮಾಡಿದ್ದಾರೆ. ಮಲಯಾಳಂನ 'ಅಮರ್ ಅಕ್ಬರ್ ಆಂಟನಿ' ಚಿತ್ರವನ್ನು ರೀಮೇಕ್ ಮಾಡಿರುವ ಅವರು, ಮೂಲ ಚಿತ್ರದಲ್ಲಿನ ಕಥೆಯನ್ನು ಸಾಕಷ್ಟು ಬದಲಾವಣೆ ಮಾಡಿಕೊಂಡಿದ್ದಾರಂತೆ. ಹಾಡುಗಳು, ಸಾಹಸ ದೃಶ್ಯಗಳ ಸಂಯೋಜನೆಯನ್ನು ವಿಭಿನ್ನವಾಗಿ ಸಂಯೋಜಿಸಿದ್ದಾರಂತೆ.

ಮೂವರು ಹೀರೊಗಳ ಜೊತೆಗೆ ಮಾಲಾಶ್ರೀ ಅವರು ವಿಶೇಷ ಪಾತ್ರವೊಂದರಲ್ಲಿ ನಟಿಸಿರುವುದು ಚಿತ್ರದ ವಿಶೇಷ. ಖಾಕಿ ಸಮವಸ್ತ್ರದಲ್ಲಿ ಕಿಡಿಗೇಡಿಗಳನ್ನು ಬಗ್ಗುಬಡಿಯುವ ಮಾಲಾಶ್ರೀ ಅವರ ಪಾತ್ರ ಅಭಿಮಾನಿಗಳಿಗೆ ಇಷ್ಟವಾಗುತ್ತದೆ ಎನ್ನುವುದು ನಿರ್ದೇಶಕರ ಅನಿಸಿಕೆ. ಐಂದ್ರಿತಾ ರೇ ವಿಶೇಷ ಹಾಡೊಂದರಲ್ಲಿ ಕಾಣಿಸಿಕೊಂಡಿರುವುದು ಚಿತ್ರದ ಮತ್ತೊಂದು ವಿಶೇಷ.

ಇತ್ತೀಚೆಗೆ ನಿಧನರಾದ ನಟ ಸಂಕೇತ್ ಕಾಶಿ ಅಭಿನಯದ ಕೊನೆಯ ಚಿತ್ರ ಇದಂತೆ. ಶ್ರೀನಿವಾಸ್ ಮೂರ್ತಿ, ಗಿರಿಜಾ ಲೋಕೇಶ್, ಎಂ.ಎನ್. ಲಕ್ಷ್ಮಿ ದೇವಿ, ಬಿರಾದಾರ್, ಬ್ಯಾಂಕ್ ಜನಾರ್ದನ್ ಅವರಂಥ ಹಿರಿಯ ನಟರು ತಾರಾಗಣದಲ್ಲಿರುವ ಈ ಚಿತ್ರಕ್ಕೆ ಅರ್ಜುನ್ ಜನ್ಯ ಸಂಗೀತ ಹಾಗೂ ಸಂತೋಷ್ ರೈ ಪಾತಾಜೆ ಛಾಯಾಗ್ರಹಣ ಇದೆ.





# ನಟರಾಜನ ಸಾವಧಾನ

ಕಳೆದ ಎರಡು ತಿಂಗಳುಗಳಿಂದಲೂ ಬಿಡುಗಡೆ ದಿನವನ್ನು ಮುಂದೂಡಿಕೊಂಡೇ ಬಂದಿರುವ 'ನಟರಾಜ ಸರ್ವೀಸ್' ಚಿತ್ರ ಕೊನೆಗೂ ನವೆಂಬರ್‌ನಲ್ಲಿ ತೆರೆ ಕಂಡೇ ತೀರಲು ಸಿದ್ಧತೆ ನಡೆಸಿದೆ.

'ನಟರಾಜ ಸರ್ವೀಸ್' ಶರಣ್ ಹಾಗೂ ಮಯೂರಿ ಅಭಿನಯದ ಚಿತ್ರ. ಈ ಚಿತ್ರದ ಮೂಲಕ ಶರಣ್ ಮತ್ತೆ ಗೆಲುವಿನ ರುಚಿ ಸವಿಯುವ ತವಕದಲ್ಲಿದ್ದರೆ, ಮಯೂರಿ ಅವರಿಗೆ ಮತ್ತೊಂದು ವಿಭಿನ್ನ ಪಾತ್ರದ ಮೂಲಕ ಚಿತ್ರರಸಿಕರ ಎದುರು ಬರುತ್ತಿರುವ ಪುಲಕ. ಶರಣ್ ಅವರ ಅಭಿಮಾನಿಯೂ ಆಗಿರುವ ಮಯೂರಿ, ಸಾಕಷ್ಟು ಕಷ್ಟಪಟ್ಟೇ ಈ ಚಿತ್ರದಲ್ಲಿ ಅಭಿನಯಿಸಿದ್ದಾರಂತೆ. ಶರಣ್ ಎದುರು ನಿಂತರೆ ಅವರ ಹಿಂದಿನ ಚಿತ್ರಗಳ ಪಾತ್ರಗಳು ಮತ್ತು ಸಂಭಾಷಣೆಗಳು ನೆನಪಾಗಿ ಮಯೂರಿ ಅವರಿಗೆ ನಗು ಬರುತ್ತಿತ್ತಂತೆ. ನಗು ಹತ್ತಿಕ್ಕಿಕೊಂಡೇ ಅಭಿನಯಿಸುವ ಸವಾಲನ್ನು ಯಶಸ್ವಿಯಾಗಿ ನಿಭಾಯಿಸಿದ್ದೇನೆ ಎನ್ನುವ ನಂಬಿಕೆ ಅವರದು. ತಾಳ್ಮೆಯೇ ಮೈವೆತ್ತ ಸಹನಾ ಎನ್ನುವ ತರುಣಿಯ ಪಾತ್ರದಲ್ಲಿ ಅವರು ಕಾಣಿಸಿಕೊಂಡಿದ್ದಾರಂತೆ.

ಹಾರರ್ ಥ್ರಿಲ್ಲರ್‌ಗಳು ಹಾಗೂ ಮಲ್ಟಿ ಸ್ಟಾರರ್ ಚಿತ್ರಗಳು ಹೆಚ್ಚು ಸುದ್ದಿಯಲ್ಲಿರುವ ಸಂದರ್ಭದಲ್ಲಿ ಹಾಸ್ಯದ ಹೂರಣವನ್ನು ನೆಚ್ಚಿಕೊಂಡ 'ನಟರಾಜ ಸರ್ವೀಸ್' ಚಿತ್ರ ಗೆಲ್ಲಲಿದೆ ಎನ್ನುವ ನಿರೀಕ್ಷೆ ನಿರ್ದೇಶಕ ಪವನ್ ಒಡೆಯರ್ ಅವರದು. ಪುನೀತ್ ಅವರ ಹೊಸ ಚಿತ್ರವೊಂದನ್ನು ನಿರ್ದೇಶಿಸಲು ಸಿದ್ಧತೆ ನಡೆಸುತ್ತಿರುವ ಅವರು, ಅದಕ್ಕೆ ಪೂರ್ವಭಾವಿಯಾಗಿ ನಟರಾಜನ ಗೆಲುವನ್ನು ಸವಿಯುವ ಹುಮ್ಮಸ್ಸಿನಲ್ಲಿದ್ದಾರೆ. ಅನೂಪ್ ಸೀಳಿನ್ ಸಂಗೀತ ಸಂಯೋಜನೆಯ ಗೀತೆಗಳು ಜನಪ್ರಿಯವಾಗಿರುವುದು ಕೂಡ ಒಡೆಯರ್ ನಿರೀಕ್ಷೆಯನ್ನು ಹೆಚ್ಚಿಸಿದೆ.